# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 30

ಸದಸ್ಯರ ಹೆಸರು : ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 09.12.2024

ಉತ್ತರಿಸಬೇಕಾದ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿರುವ ಒಟ್ಟು ಸರ್ಕಾರಿ ಆಸ್ಪತ್ರೆಗಳೆಷ್ಟು; ಈ ಆಸ್ಪತ್ರೆಗಳಿಗೆ ತಜ್ಞವೈದ್ಯರು, ಆರೋಗ್ಯ ನಿರೀಕ್ಷಣಾಧಿಕಾರಿಗಳು ಸೇರಿದಂತೆ ಮಂಜೂರಾಗಿರುವ ಒಟ್ಟು ಹುದ್ದೆಗಳೆಷ್ಟು; (ಹುದ್ದೆವಾರು ವಿವರಗಳನ್ನು ಜಿಲ್ಲಾವಾರು ಒದಗಿಸುವುದು) | ರಾಜ್ಯದಲ್ಲಿ ಪ್ರಸ್ತುತ 2159 ಗ್ರಾಮೀಣ ಪ್ರಾಥಮಿಕ ಆರೋಗ್ಯ ಕೇಂದ್ರಗಳು, 365 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 206 ಗ್ರಾಮೀಣ ಸಮುದಾಯ ಆರೋಗ್ಯ ಕೇಂದ್ರಗಳು, 9 ನಗರ ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು 147 ತಾಲ್ಲೂಕು ಆಸ್ಪತ್ರೆಗಳು, 155 ಆರೋಗ್ಯ ವಿಸ್ತರಣಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.<br>ಆರೋಗ್ಯ ಇಲಾಖೆ ವ್ಯಾಪ್ತಿಯ ಜಿಲ್ಲಾ ಆಸ್ಪತ್ರೆ ಹಾಗೂ 100 ಹಾಸಿಗೆಯ ಮೇಲ್ಪಟ್ಟ ಒಟ್ಟು-22 ಸಾರ್ವಜನಿಕ ಆಸ್ಪತ್ರೆಗಳು ಕಾರ್ಯ ನಿರ್ವಹಿಸುತ್ತಿವೆ. ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ.<br>ರಾಜ್ಯದಲ್ಲಿರುವ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಮಂಜೂರಾಗಿರುವ ವಿವಿಧ ತಜ್ಞವೈದ್ಯ ಹುದ್ದೆಗಳ ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.<br>ಆಸ್ಪತ್ರೆಗಳಿಗೆ ಆರೋಗ್ಯ ನಿರೀಕ್ಷಣಾಧಿಕಾರಿಗಳ ಮಂಜೂರಾದ ಹುದ್ದೆಗಳ ವಿವರವನ್ನು **ಅನುಬಂಧ-3**ರಲ್ಲಿ ನೀಡಲಾಗಿದೆ. |
| ಆ. | ಕಳೆದ 02 ವರ್ಷಗಳಿಂದ ಯಾವ ಹಂತದ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಲಾಗಿದೆ; (ಹುದ್ದೆವಾರು ವಿವರ ನೀಡುವುದು) | 2020-21ನೇ ಸಾಲಿನಲ್ಲಿ 820 ತಜ್ಞರು 1183 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಹಾಗೂ 85 ದಂತ ಆರೋಗ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.<br>ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್‌ಎಫ್‌ಡಬ್ಲ್ಯೂ 709 ಹೆಚ್‌ಎಸ್‌ಎಂ 2017, ದಿನಾಂಕ:17.05.2022ರನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿ ಇರುವ 320 ವಿವಿಧ ಅರೆವೈದ್ಯಕೀಯ ಹುದ್ದೆಗಳನ್ನು ಭರ್ತಿಮಾಡಲು ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ:ಎಸ್.ಆರ್.ಸಿ./ಕೆ.ಕೆ./14/2022-23, ದಿನಾಂಕ: 24.08.2022ರಲ್ಲಿ ಹಾಗೂ ಮಿಕ್ಕುಳಿದ ವೃಂದದಲ್ಲಿ ಖಾಲಿ ಇರುವ 558 ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ:ಎಸ್ಆರ್.ಸಿ./ಆರ್.ಪಿ.ಸಿ./15/2022-23, ದಿನಾಂಕ: 02.09.2022ರಲ್ಲಿ ಹುದ್ದೆಗಳನ್ನು ಭರ್ತಿಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನಾ ಕಾರ್ಯವು ಪೂರ್ಣಗೊಂಡಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸುವ ಹಂತದಲ್ಲಿದ್ದು, ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ಉಳಿದಂತೆ ಕಳೆದ ಎರಡು ವರ್ಷಗಳಲ್ಲಿ ಯಾವುದೇ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಚುರಪಡಿಸಿರುವುದಿಲ್ಲ. |

<table>
<tr>
<td>ಇ.</td>
<td>ಖಾಲಿ ಹುದ್ದೆಗಳ ಪರಿಣಾಮ ರೋಗಿಗಳಿಗೆ ತೊಂದರೆಯಾಗುತ್ತಿರುವುದನ್ನು ಸರ್ಕಾರ ಮನಗಂಡಿದೆಯೇ; ರೋಗಿಗಳಿಗೆ ತೊಂದರೆಯಾಗಿರುವ ಕುರಿತು ಎಷ್ಟು ಪ್ರಕರಣಗಳು ವರದಿಯಾಗಿದೆ; (ವಿವರ ನೀಡುವುದು)</td>
<td>ಖಾಲಿ ಹುದ್ದೆಗಳ ಪರಿಣಾಮ ರೋಗಿಗಳಿಗೆ ತೊಂದರೆಯಾಗಿರುವ ಬಗ್ಗೆ 2 ಪ್ರಕರಣಗಳು ವರದಿಯಾಗಿವೆ:
<table>
<tr><td>ಕ್ರ. ಸಂ</td><td>ವಿಷಯ</td><td>ತೆಗೆದುಕೊಂಡಕ್ರಮ</td></tr>
<tr><td>1</td><td>ದೊಡ್ಡ ಅಗ್ರಹಾರ ಪ್ರಾಥಮಿಕ ಆರೋಗ್ಯ ಕೇಂದ್ರ, ಆಸ್ಪತ್ರೆಯ ಕುಂದು ಕೊರತೆಗಳ ಬೇಡಿಕೆಗಳ ಅರ್ಜಿ ಬಗ್ಗೆ</td><td>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ತುಮಕೂರು ಇವರಿಗೆ ದಿನಾಂಕ: 18-07-2024 ರಂದು ತನಿಖೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ.</td></tr>
<tr><td>2</td><td>ಚನ್ನಪಟ್ಟಣ ಸಾರ್ವಜನಿಕ ಆಸ್ಪತ್ರೆಯಲ್ಲಿನ ಆಡಳಿತ ಅವ್ಯವಸ್ಥೆ, ವೈದ್ಯರು ಸಿಬ್ಬಂದಿ ಕೊರತೆ ಬಗ್ಗೆ</td><td>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ರಾಮನಗರ ಇವರಿಗೆ ತನಿಖೆ ಮಾಡಿ ವರದಿ ಸಲ್ಲಿಸಲು ಸೂಚಿಸಲಾಗಿದೆ.</td></tr>
</table>
</td>
</tr>
<tr>
<td>ಈ.</td>
<td>ತಜ್ಞವೈದ್ಯರು, ಆರೋಗ್ಯ ನಿರೀಕ್ಷಣಾಧಿಕಾರಿಗಳು ಸೇರಿದಂತೆ ಮಂಜೂರಾಗಿರುವ ಎಲ್ಲಾ ಹಂತದ ಹುದ್ದೆಗಳ ಭರ್ತಿಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈ ನೇಮಕ ಪ್ರಕ್ರಿಯೆ ಆರಂಭಗೊಂಡಿದೆಯೇ? (ವಿವರ ನೀಡುವುದು)</td>
<td>ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಕ್ರಮ ಕೈಗೊಳಲಾಗುತ್ತಿದೆ:<br><br>ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆ/ತಾಲ್ಲೂಕುಆಸ್ಪತ್ರೆಗಳ 337 ವಿವಿಧ ತಜ್ಞವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಪತ್ರ ಸಂಖ್ಯೆ :ಆಕುಕ 453 ಹೆಚ್ಎಸ್ಹೆಚ್ 2022, ದಿನಾಂಕ:13.12.2022ರಲ್ಲಿ ರಾಜ್ಯದ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳನ್ನು ಹೊರತುಪಡಿಸಿ ಇತರೆ ಜಿಲ್ಲೆಗಳಲ್ಲಿನ ಗ್ರಾಮೀಣ ಪ್ರದೇಶಗಳ ಪ್ರಾ.ಆ.ಕೇಂದ್ರ ಮತ್ತು ಸ.ಆ.ಕೇಂದ್ರಗಳಲ್ಲಿ ಖಾಲಿಯಿರುವ ತಜ್ಞವೈದ್ಯರು ಮತ್ತು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಚಾಲ್ತಿಯಲ್ಲಿರುವ ಸರ್ಕಾರದ ಆದೇಶಗಳಡಿ ಗುತ್ತಿಗೆ ಆಧಾರದ ಮೇಲೆ ಜಿಲ್ಲಾಧಿಕಾರಿಗಳ ಹಂತದಲ್ಲಿ ನಿಯಾಮಾನುಸಾರ ಭರ್ತಿಮಾಡಲು ಅನುಮತಿ ನೀಡಲಾಗಿದೆ.<br>ಸರ್ಕಾರದ ಆದೇಶ ಸಂಖ್ಯೆ:ಆಕುಕ 619 ಹೆಚ್ಎಸ್ಹೆಚ್ 2022, ದಿ:17.01.2024ರಲ್ಲಿ ಆಕುಕ ಇಲಾಖೆಯಲ್ಲಿ ಖಾಲಿ ಇರುವ 337 ತಜ್ಞವೈದ್ಯರನ್ನು ಮತ್ತು 250 ಸಾ.ಕ.ವೈದ್ಯಾಧಿಕಾರಿಗಳನ್ನು ಕೆಲವು ಷರತ್ತುಗಳಿಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ ಭರ್ತಿಮಾಡಲು ಅನುಮತಿ ನೀಡಿದೆ.<br>ಇಲಾಖೆಯ ಮುಖಾಂತರ ಸೇವಾನಿರತ ಸ್ನಾತಕೋತ್ತರ ವ್ಯಾಸಂಗ ಪೂರೈಸಿ ಬರುವ ತಜ್ಞವೈದ್ಯರನ್ನು ತಜ್ಞತೆ ಹುದ್ದೆಗೆ ನೇಮಿಸಲಾಗುತ್ತಿದೆ.<br>ಸ್ನಾತಕೋತ್ತರ ವ್ಯಾಸಂಗವನ್ನು ಪೂರೈಸಿ 1 ವರ್ಷದ ಕಡ್ಡಾಯ ಸೇವೆಗಾಗಿ ಬರುವ ವೈದ್ಯ ಅಭ್ಯರ್ಥಿ/ತಜ್ಞವೈದ್ಯ ಅಭ್ಯರ್ಥಿಗಳನ್ನು ನೇಮಕ ಮಾಡುವ ಮೂಲಕ ವೈದ್ಯರ/ತಜ್ಞರುಗಳ ಕೊರತೆಯನ್ನು ನೀಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>ಆರೋಗ್ಯ ನಿರೀಕ್ಷಣಾಧಿಕಾರಿಗಳು ಸೇರಿದಂತೆ ಮಂಜೂರಾಗಿರುವ ಎಲ್ಲಾ ಹಂತದ ಹುದ್ದೆಗಳ ಭರ್ತಿಗೆ ಈ ಕೆಳಕಂಡಂತೆ ಕ್ರಮಕೈಗೊಂಡಿದೆ:<br>ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸೇನೆನಿ 2024, ಬೆಂಗಳೂರು, ದಿನಾಂಕ:10.09.2024ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ವಿವಿಧ ಇಲಾಖೆಗಳ ಗ್ರೂಪ್-ಸಿ ಮತ್ತು ಗ್ರೂಪ್-ಬಿ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿಮಾಡಲು ಈಗಾಗಲೇ ಹೊರಡಿಸಲಾಗಿರುವ ಅಧಿಸೂಚನೆಗಳಿಗೆ ಹಾಗೂ ಮುಂದಿನ ಒಂದು ವರ್ಷದಲ್ಲಿ ಹೊರಡಿಸಲಿರುವ ಅಧಿಸೂಚನೆಗಳಿಗೆ ಸಂಬಂಧಿಸಿದಂತೆ ಎಲ್ಲಾ ಪ್ರವರ್ಗಗಳ</td>
</tr>
</table>

ಅಭ್ಯರ್ಥಿಗಳಿಗೆ ಒಂದು ಬಾರಿಗೆ ಅನ್ವಯವಾಗುವಂತೆ (One Time Measure) ಗರಿಷ್ಠ ವಯೋಮಿತಿಯಲ್ಲಿ 3 ವರ್ಷಗಳ ಸಡಿಲಿಕೆಯನ್ನು ನೀಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿ ಖಾಲಿ ಇರುವ ವಿವಿಧ ಅರೆವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಅಧಿಸೂಚನೆ:ಹೆಚ್‌ಎಫ್‌ಡಬ್ಲ್ಯು 709 ಹೆಚ್‌ಎಸ್‌ಎಂ 2017, ದಿನಾಂಕ:17.05.2022ರನ್ವಯ ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆ ಸಂಖ್ಯೆ:ಎಸ್.ಆರ್.ಸಿ./ಕೆ.ಕೆ./14/2022-23, ದಿನಾಂಕ:24.08.2022ರಲ್ಲಿ ಈ ಕೆಳಕಂಡ ವಿವಿಧ ಅರೆವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನಾ ಕಾರ್ಯವು ಪೂರ್ಣಗೊಂಡಿದ್ದು, ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸುವ ಹಂತದಲ್ಲಿದ್ದು, ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.

| ಕ್ರ. ಸಂ. | ಹುದ್ದೆ | ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆ |
|---|---|---|
| 1 | ಸೈಕಾಲಜಿಸ್ಟ್ | 3 |
| 2 | ಸೈಕ್ಯಾಟ್ರಿಕ್ ಸೋಷಿಯಲ್ ವರ್ಕರ್ | 1 |
| 3 | ಮೈಕ್ರೋಬಯಾಲಜಿಸ್ಟ್ | 6 |
| 4 | ಸಹಾಯಕ ಎಂಟಮಾಲಜಿಸ್ಟ್* | 1 |
| 5 | ಫಿಜಿಯೋಥೆರಪಿಸ್ಟ್ | 5 |
| 6 | ಡೆಂಟಲ್ ಮೆಕ್ಯಾನಿಕ್ | 3 |
| 7 | ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ | 54 |
| 8 | ನೇತ್ರಾಧಿಕಾರಿ | 15 |
| 9 | ಫಾರ್ಮಸಿ ಅಧಿಕಾರಿ | 98 |
| 10 | ಇ.ಸಿ.ಜಿ.ತಂತ್ರಜ್ಞ | 5 |
| 11 | ಡಯಾಲಿಸಿಸ್ಟ್ ತಂತ್ರಜ್ಞ | 2 |
| 12 | ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ | 126 |
| 13 | ಎಲೆಕ್ಟ್ರೀಷಿಯನ್ | 1 |
| | ಒಟ್ಟು | 320 |

ಕಲ್ಯಾಣ ಕರ್ನಾಟಕ ವೃಂದಲ್ಲಿನ ಸಹಾಯಕ ಕೀಟಶಾಸ್ತ್ರಜ್ಞರ ಹುದ್ದೆಗೆ ಅಧಿಸೂಚನೆಯಲ್ಲಿ ತಿಳಿಸಿದ್ದ ವಿದ್ಯಾರ್ಹತೆಯನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಈ ಬಗ್ಗೆ ನ್ಯಾಯಮಂಡಳಿಯ ಆದೇಶದನ್ವಯ ಪರಿಷ್ಕೃತ ವಿದ್ಯಾರ್ಹತೆಯನ್ನು ಅಳವಡಿಸಿ ತಿದ್ದುಪಡಿ ಅಧಿಸೂಚನೆಯನ್ನು ದಿನಾಂಕ:13.11.2024ರಂದು ಹೊರಡಿಸಲಾಗಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:03.12.2024 ಆಗಿರುತ್ತದೆ. ಸದರಿ ಕೊನೆಯ ದಿನಾಂಕದ ನಂತರ ಅರ್ಜಿಸಲ್ಲಿಸಿರುವ ಅಭ್ಯರ್ಥಿಗಳಲ್ಲಿ ಅರ್ಹ ಅಭ್ಯರ್ಥಿಗಳಿಗೆ ಮೂಲ ದಾಖಲಾತಿ ಪರಿಶೀಲನೆಯನ್ನು ನಡೆಸಿ, ಆಯ್ಕೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು.

ಆರೋಗ್ಯ ಇಲಾಖೆಯಲ್ಲಿ ಮಿಕ್ಕುಳಿದ ವೃಂದದಲ್ಲಿ ಖಾಲಿ

ಇರುವ ಅರೆವೈದ್ಯಕೀಯ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್ಎಫ್ಡಬ್ಲ್ಯು 709 ಹೆಚ್ಎಸ್ಎಂ 2017, ದಿನಾಂಕ:17.05.2022ರಲ್ಲಿ ಅನುಮೋದಿಸಿದ್ದು, ಅದರನ್ವಯ ವಿಶೇಷ ನೇಮಕಾತಿ ಸಮಿತಿಯ ಅಧಿಸೂಚನೆಸಂಖ್ಯೆ: ಎಸ್ಆರ್.ಸಿ./ ಆರ್.ಪಿ.ಸಿ. /15/2022-23, 02.09.2022ರಲ್ಲಿ ಈ ಕೆಳಕಂಡ ಹುದ್ದೆಗಳನ್ನು ಭರ್ತಿಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಹ ಅಭ್ಯರ್ಥಿಗಳ ಮೂಲ ದಾಖಲಾತಿ ಪರಿಶೀಲನಾ ಕಾರ್ಯವು ಪೂರ್ಣಗೊಂಡಿದ್ದು, ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸುವ ಹಂತದಲ್ಲಿದ್ದು, ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ

| ಕ್ರ. ಸಂ. | ಪದನಾಮ | ಅಧಿಸೂಚಿಸಿದ ಹುದ್ದೆಗಳ ಸಂಖ್ಯೆ |
|---|---|---|
| 1. | ಫಾರ್ಮಸಿಅಧಿಕಾರಿ | 400 |
| 2. | ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ | 150 |
| 3. | ವಿಕಿರಣ ಶಾಸ್ತ್ರ ಚಿತ್ರಣ ಅಧಿಕಾರಿ | 08 |
| | ಒಟ್ಟು | 558 |

ಸರ್ಕಾರದ ಪತ್ರ ಸಂಖ್ಯೆ:ಆಕುಕ 103 ಹೆಚ್.ಎಸ್.ಎಂ. 2019, ದಿನಾಂಕ:03.02.2024ರನ್ವಯ ಖಾಲಿ ಇರುವ ಕಿರಿಯ ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ-200 ಹಾಗೂ ಫಾರ್ಮಸಿ ಅಧಿಕಾರಿ-400 ಹುದ್ದೆಗಳನ್ನು ನೇರನೇಮಕಾತಿ ಮೂಲಕ ಹುದ್ದೆಗಳನ್ನು ಭರ್ತಿ ಮಾಡುವವರೆಗೆ ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಈ ಕೆಳಕಂಡ ಅರೆವೈದ್ಯಕೀಯ ಹುದ್ದೆಗಳನ್ನು ಭರ್ತಿಮಾಡಲು ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

| ಕ್ರ. ಸಂ. | ಪದನಾಮ | ಉಳಿಕೆ ಮೂಲ ವೃಂದ | ಕಲ್ಯಾಣಕ ರ್ನಾಟಕವೃಂದ | ಒಟ್ಟು |
|---|---|---|---|---|
| 1 | ಕ್ಲಿನಿಕಲ್ ಇನ್ಸ್ಟ್ರಕ್ಟರ್ | 1 | 0 | 1 |
| 2 | ಸಹಾಯಕ ಕೀಟಶಾಸ್ತ್ರಜ್ಞರು | 7 | 2 | 9 |
| 3 | ಮೈಕ್ರೋಬಯಾಲಜಿಸ್ಟ್ | 12 | 0 | 12 |
| 4 | ಕ್ಲೀನಿಕಲ್ ಸೈಕಾಲಜಿಸ್ಟ್ | 6 | 2 | 8 |
| 5 | ಸೈಕ್ಯಾಟ್ರಿಕ್ ಸೋಷಿಯಲ್ ವರ್ಕರ್ | 7 | 0 | 7 |
| 6 | ಕಿರಿಯ ರಸಾಯನ ಶಾಸ್ತ್ರಜ್ಞರು | 15 | 3 | 18 |
| 7 | ಫಾರ್ಮಸಿ ಅಧಿಕಾರಿ | 640 | 65 | 705 |
| 8 | ಶುಶ್ರೂಷಣಾಧಿಕಾರಿ | 1694 | 351 | 2045 |
| 9 | ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ | 3317 | 133 | 3450 |
| 10 | ಆರೋಗ್ಯ ನಿರೀಕ್ಷಣಾಧಿಕಾರಿ | 2628 | 221 | 2849 |

| | | | | | | |
|---|---|---|---|---|---|---|
| | | 11 | ಕಿರಿಯ ವೈದ್ಯಕೀಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ | 356 | 57 | 413 |
| | | 12 | ಹಿರಿಯ ವೈದ್ಯಕೀಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ | 34 | 2 | 36 |
| | | 13 | ಕಿರಿಯ ವೈದ್ಯಕೀಯ ವಿಕಿರಣ ಶಾಸ್ತ್ರ ಚಿತ್ರಣ ಅಧಿಕಾರಿ | 59 | 30 | 89 |
| | | 14 | ಹಿರಿಯ ವೈದ್ಯಕೀಯ ವಿಕಿರಣ ಶಾಸ್ತ್ರ ಚಿತ್ರಣ ಅಧಿಕಾರಿ | 10 | 0 | 10 |
| | | 15 | ನೇತ್ರಾಧಿಕಾರಿ | 125 | 5 | 130 |
| | | 16 | ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ | 83 | 6 | 89 |
| | | | ಒಟ್ಟು | 8994 | 877 | 987<br>1 |

**HFW 64 HSD 2024**

**( ದಿನೇಶ್ ಗುಂಡೂರಾವ್ )**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅನುಬಂಧ-1

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಕೆಯ ವ್ಯಾಪ್ತಿಯ ಜಿಲ್ಲಾ ಆಸ್ಪತ್ರೆ ಹಾಗೂ 100 ಹಾಸಿಗೆಗಳ ಮೇಲ್ಪಟ್ಟ ಸಾರ್ವಜನಿಕ ಆಸ್ಪತ್ರೆಗಳ ವಿವರ.**

| ಕ್ರ.ಸಂ | ಜಿಲ್ಲೆಯ ಹೆಸರು | ಹಾಸಿಗೆಗಳ ಸಂಖ್ಯೆ |
|---|---|---|
| 1 | ಜಿಲ್ಲಾ ಆಸ್ಪತ್ರೆ ಬಾಗಲಕೋಟೆ | 400 |
| 2 | ಜಿಲ್ಲಾ ಆಸ್ಪತ್ರೆ ಬಳ್ಳಾರಿ | 210 |
| 3 | ಕೆ ಸಿ ಸಾರ್ವಜನಿಕ ಆಸ್ಪತ್ರೆ ಮಲ್ಲೇಶ್ವರಂ ಬೆಂಗಳೂರು | 450 |
| 4 | ಸರ್ ಸಿ ವಿ ರಾಮನ್ ಸಾರ್ವಜನಿಕ ಆಸ್ಪತ್ರೆ ಬೆಂಗಳೂರು | 250 |
| 5 | ಸಾರ್ವಜನಿಕ ಆಸ್ಪತ್ರೆ ಜಯನಗರ ಬೆಂಗಳೂರು | 300 |
| 6 | ಜಿಲ್ಲಾ ಆಸ್ಪತ್ರೆ ಚಿತ್ರದುರ್ಗ | 250 |
| 7 | ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ ಮಂಗಳೂರು | 905 |
| 8 | ಚಿಗಟೇರಿ ಜಿಲ್ಲಾ ಆಸ್ಪತ್ರೆ ದಾವಣಗೆರೆ | 930 |
| 9 | ಜಿಲ್ಲಾ ಆಸ್ಪತ್ರೆ ಧಾರವಾಡ | 250 |
| 10 | ಎಸ್ ಎನ್ ಆರ್ ಜಿಲ್ಲಾ ಆಸ್ಪತ್ರೆ ಕೋಲಾರ | 400 |
| 11 | ಜಿಲ್ಲಾ ಆಸ್ಪತ್ರೆ ಮೇಟಗಳ್ಳಿ ಮೈಸೂರು | 300 |
| 12 | ಜಿಲ್ಲಾ ಆಸ್ಪತ್ರೆ ರಾಮನಗರ | 250 |
| 13 | ಜಿಲ್ಲಾ ಆಸ್ಪತ್ರೆ ತುಮಕೂರು | 500 |
| 14 | ಜಿಲ್ಲಾ ಆಸ್ಪತ್ರೆ ಉಡುಪಿ | 124 |
| 15 | ಜಿಲ್ಲಾ ಆಸ್ಪತ್ರೆ ವಿಜಯಪುರ | 426 |
| 16 | ಸಾರ್ವಜನಿಕ ಆಸ್ಪತ್ರೆ ಕೊಳ್ಳೇಗಾಲ ಚಾಮರಾಜನಗರ ಜಿಲ್ಲೆ | 150 |
| 17 | ಸಾರ್ವಜನಿಕ ಆಸ್ಪತ್ರೆ ಹೊಳೆನರಸೀಪುರ ಹಾಸನ ಜಿಲ್ಲೆ | 250 |
| 18 | ಸಾರ್ವಜನಿಕ ಆಸ್ಪತ್ರೆ ಸಕಲೇಶಪುರ ಹಾಸನ ಜಿಲ್ಲೆ | 150 |
| 19 | ಸಾರ್ವಜನಿಕ ಆಸ್ಪತ್ರೆ ವಿರಾಜಪೇಟೆಕೊಡಗು ಜಿಲ್ಲೆ | 140 |
| 20 | ಸಾರ್ವಜನಿಕ ಆಸ್ಪತ್ರೆ ಸೋಮವಾರಪೇಟೆ ಕೊಡಗು ಜಿಲ್ಲೆ | 120 |
| 21 | ಸಾರ್ವಜನಿಕ ಆಸ್ಪತ್ರೆ ಶಿಕಾರಿಪುರ ಶಿವಮೊಗ್ಗ ಜಿಲ್ಲೆ | 150 |
| 22 | ಸಾರ್ವಜನಿಕ ಆಸ್ಪತ್ರೆ ಕೆ ಜಿ ಎಫ್ ಕೋಲಾರ ಜಿಲ್ಲೆ | 150 |

(signature)
(ರಂಗೀಲ. ರಾಜಲಕ್ಷ್ಮೀರ)
ಉ.ಕಾ(ಆ)

ಪ್ರಶ್ನೆ ಸಂಖ್ಯೆ:30ಕ್ಕೆ ಅನುಬಂಧ-2

## ತಜ್ಞ ವೈದ್ಯರು/ಸಾ.ಕ.ವೈದ್ಯಾಧಿಕಾರಿಗಳ ಜಿಲ್ಲಾವಾರು ಮಂಜೂರಾದ ಮತ್ತು ಖಾಲಿ ಹುದ್ದೆಗಳ ಮಾಹಿತಿ ದಿ:05.12.2024 ರಂತೆ

| ಕ್ರ.ಸಂ | ಜಿಲ್ಲೆಯ ಹೆಸರು | GM | GS | OBG | PAED | ANAE | OPTHO | ORTHO | ENT | SKIN | RADIO | PATHO / BB | PSY |
|---|---|---|---|---|---|---|---|---|---|---|---|---|---|
| | | S | S | S | S | S | S | S | S | S | S | S | S |
| 1 | ಬೆಂಗಳೂರು ನಗರ | 19 | 19 | 30 | 18 | 22 | 10 | 12 | 9 | 9 | 5 | 7 | 3 |
| 2 | ಬೆಂಗಳೂರು (ಗ್ರಾ) | 4 | 4 | 8 | 7 | 7 | 4 | 4 | 4 | 0 | 5 | 0 | 0 |
| 3 | ರಾಮನಗರ | 6 | 5 | 12 | 8 | 8 | 4 | 4 | 4 | 1 | 2 | 1 | 1 |
| 4 | ಕೋಲಾರ | 7 | 10 | 13 | 10 | 10 | 8 | 7 | 7 | 5 | 3 | 2 | 1 |
| 5 | ಚಿಕ್ಕಬಳ್ಳಾಪುರ | 7 | 7 | 13 | 12 | 12 | 6 | 9 | 6 | 1 | 6 | 1 | 1 |
| 6 | ತುಮಕೂರು | 12 | 12 | 23 | 17 | 19 | 13 | 13 | 10 | 6 | 5 | 2 | 1 |
| 7 | ಚಿತ್ರದುರ್ಗ | 8 | 7 | 20 | 19 | 19 | 7 | 8 | 6 | 6 | 4 | 2 | 1 |
| 8 | ದಾವಣಗೆರೆ | 8 | 8 | 16 | 11 | 13 | 8 | 7 | 6 | 5 | 2 | 2 | 1 |
| 9 | ಶಿವಮೊಗ್ಗ | 9 | 8 | 17 | 16 | 16 | 7 | 6 | 6 | 5 | 2 | 2 | 1 |
| 10 | ಮೈಸೂರು | 7 | 7 | 23 | 22 | 21 | 7 | 8 | 7 | 7 | 9 | 2 | 1 |
| 11 | ಮಂಡ್ಯ | 6 | 6 | 19 | 16 | 16 | 6 | 7 | 6 | 3 | 1 | 0 | 0 |
| 12 | ಚಾಮರಾಜನಗರ | 3 | 3 | 12 | 12 | 11 | 4 | 5 | 3 | 1 | 2 | 3 | 1 |
| 13 | ಕೊಡಗು/ ಮಡಿಕೇರಿ | 7 | 10 | 14 | 12 | 11 | 4 | 4 | 3 | 2 | 3 | 1 | 1 |
| 14 | ಹಾಸನ | 8 | 9 | 25 | 24 | 23 | 7 | 8 | 6 | 4 | 3 | 1 | 1 |
| 15 | ಚಿಕ್ಕಮಗಳೂರು | 8 | 7 | 14 | 15 | 12 | 8 | 6 | 6 | 2 | 6 | 2 | 1 |
| 16 | ಉಡುಪಿ | 4 | 5 | 12 | 10 | 11 | 4 | 3 | 2 | 1 | 4 | 2 | 1 |
| 17 | ದಕ್ಷಿಣ ಕನ್ನಡ | 8 | 9 | 14 | 13 | 13 | 6 | 6 | 6 | 2 | 2 | 1 | 1 |
| 18 | ಬೆಳಗಾವಿ | 11 | 12 | 32 | 29 | 30 | 11 | 11 | 10 | 8 | 3 | 0 | 0 |
| 19 | ಕಾರವಾರ (ಉ.ಕ) | 13 | 13 | 16 | 14 | 15 | 11 | 12 | 11 | 11 | 2 | 2 | 1 |
| 20 | ಧಾರವಾಡ | 6 | 5 | 5 | 4 | 4 | 5 | 5 | 4 | 1 | 4 | 2 | 0 |
| 21 | ಗದಗ | 5 | 5 | 9 | 8 | 8 | 6 | 5 | 4 | 4 | 1 | 2 | 1 |
| 22 | ಹಾವೇರಿ | 9 | 12 | 22 | 17 | 21 | 9 | 9 | 8 | 7 | 1 | 2 | 1 |
| 23 | ವಿಜಯಪುರ | 6 | 6 | 17 | 16 | 15 | 6 | 6 | 5 | 5 | 1 | 2 | 1 |
| 24 | ಬಾಗಲಕೋಟೆ | 8 | 11 | 19 | 17 | 16 | 7 | 7 | 6 | 6 | 2 | 2 | 1 |
| 25 | ಕಲಬುರಗಿ | 15 | 14 | 36 | 28 | 30 | 10 | 12 | 9 | 7 | 3 | 4 | 2 |
| 26 | ಯಾದಗಿರಿ | 3 | 3 | 10 | 9 | 10 | 4 | 3 | 3 | 2 | 1 | 0 | 1 |
| 27 | ಬೀದರ್ | 4 | 4 | 15 | 15 | 14 | 4 | 4 | 4 | 1 | 3 | 0 | 0 |
| 28 | ರಾಯಚೂರು | 4 | 4 | 10 | 10 | 11 | 4 | 4 | 4 | 2 | 2 | 0 | 0 |
| 29 | ಬಳ್ಳಾರಿ | 4 | 4 | 15 | 11 | 10 | 3 | 3 | 3 | 3 | 1 | 1 | 1 |
| 30 | ವಿಜಯನಗರ | 6 | 6 | 13 | 12 | 12 | 6 | 5 | 5 | 5 | 1 | 0 | 0 |
| 31 | ಕೊಪ್ಪಳ | 4 | 4 | 15 | 16 | 15 | 4 | 4 | 3 | 3 | 3 | 1 | 1 |
| ಒಟ್ಟು | | 229 | 239 | 519 | 448 | 455 | 203 | 207 | 176 | 125 | 92 | 49 | 27 |

ಪ್ರಶ್ನೆ ಸಂಖ್ಯೆ:30ಕ್ಕೆ ಅನುಬಂಧ-2

## ತಜ್ಞ ವೈದ್ಯರು/ಸಾ.ಕ.ವೈದ್ಯಾಧಿಕಾರಿಗಳ ಜಿಲ್ಲಾವಾರು ಮಂಜೂರಾದ ಮತ್ತು ಖಾಲಿ ಹುದ್ದೆಗಳ ಮಾಹಿತಿ ದಿ:05.12.2024 ರಂತೆ

| ಕ್ರ.ಸಂ | ಜಿಲ್ಲೆಯ ಹೆಸರು | FM | NEPHRO/ URO | TB | MICRO | BIO CHEM | CARDIO | NEURO | PLASTIC SUR | GS Burnswad | OTHERS | TOTAL |
|---|---|---|---|---|---|---|---|---|---|---|---|---|
| | | S | S | S | S | S | S | S | S | S | S | S |
| 1 | ಬೆಂಗಳೂರು ನಗರ | 1 | 2 | 0 | 3 | 1 | 0 | 0 | 0 | 0 | 2 | 172 |
| 2 | ಬೆಂಗಳೂರು (ಗ್ರಾ) | 0 | 0 | 0 | 0 | 0 | 0 | 0 | 0 | 0 | 0 | 47 |
| 3 | ರಾಮನಗರ | 1 | 1 | 0 | 0 | 0 | 0 | 0 | 0 | 0 | 0 | 58 |
| 4 | ಕೋಲಾರ | 1 | 1 | 0 | 1 | 1 | 0 | 0 | 1 | 0 | 0 | 88 |
| 5 | ಚಿಕ್ಕಬಳ್ಳಾಪುರ | 1 | 1 | 0 | 1 | 1 | 0 | 0 | 0 | 0 | 0 | 85 |
| 6 | ತುಮಕೂರು | 1 | 1 | 1 | 1 | 1 | 1 | 1 | 2 | 0 | 0 | 142 |
| 7 | ಚಿತ್ರದುರ್ಗ | 1 | 2 | 1 | 0 | 0 | 0 | 1 | 0 | 0 | 0 | 112 |
| 8 | ದಾವಣಗೆರೆ | 1 | 0 | 2 | 1 | 1 | 0 | 0 | 0 | 0 | 0 | 92 |
| 9 | ಶಿವಮೊಗ್ಗ | 1 | 1 | 0 | 1 | 0 | 0 | 0 | 0 | 0 | 0 | 98 |
| 10 | ಮೈಸೂರು | 1 | 0 | 0 | 1 | 1 | 0 | 0 | 0 | 0 | 1 | 125 |
| 11 | ಮಂಡ್ಯ | 0 | 0 | 0 | 0 | 0 | 0 | 1 | 0 | 0 | 0 | 87 |
| 12 | ಚಾಮರಾಜನಗರ | 1 | 2 | 0 | 1 | 1 | 0 | 0 | 2 | 0 | 0 | 67 |
| 13 | ಕೊಡಗು/ ಮಡಿಕೇರಿ | 0 | 0 | 1 | 0 | 0 | 1 | 0 | 0 | 0 | 0 | 74 |
| 14 | ಹಾಸನ | 0 | 0 | 1 | 0 | 0 | 0 | 0 | 0 | 0 | 0 | 120 |
| 15 | ಚಿಕ್ಕಮಗಳೂರು | 0 | 2 | 1 | 0 | 0 | 1 | 0 | 0 | 0 | 0 | 91 |
| 16 | ಉಡುಪಿ | 1 | 0 | 0 | 0 | 0 | 0 | 0 | 0 | 0 | 0 | 60 |
| 17 | ದಕ್ಷಿಣ ಕನ್ನಡ | 1 | 1 | 1 | 0 | 0 | 1 | 0 | 0 | 0 | 1 | 86 |
| 18 | ಬೆಳಗಾವಿ | 0 | 2 | 0 | 0 | 0 | 0 | 0 | 0 | 0 | 0 | 159 |
| 19 | ಕಾರವಾರ (ಉ.ಕ) | 1 | 2 | 1 | 1 | 1 | 0 | 0 | 2 | 0 | 0 | 129 |
| 20 | ಧಾರವಾಡ | 0 | 0 | 1 | 0 | 0 | 0 | 0 | 2 | 0 | 2 | 50 |
| 21 | ಗದಗ | 0 | 0 | 0 | 0 | 0 | 0 | 0 | 0 | 0 | 0 | 58 |
| 22 | ಹಾವೇರಿ | 1 | 0 | 0 | 1 | 1 | 0 | 0 | 0 | 0 | 0 | 121 |
| 23 | ವಿಜಯಪುರ | 1 | 2 | 0 | 1 | 1 | 0 | 0 | 2 | 0 | 0 | 93 |
| 24 | ಬಾಗಲಕೋಟೆ | 1 | 2 | 0 | 0 | 0 | 0 | 0 | 0 | 0 | 0 | 105 |
| 25 | ಕಲಬುರಗಿ | 1 | 3 | 0 | 1 | 0 | 1 | 1 | 0 | 1 | 2 | 180 |
| 26 | ಯಾದಗಿರಿ | 1 | 0 | 0 | 1 | 0 | 0 | 0 | 0 | 0 | 0 | 51 |
| 27 | ಬೀದರ್ | 0 | 0 | 0 | 0 | 0 | 0 | 0 | 0 | 0 | 0 | 68 |
| 28 | ರಾಯಚೂರು | 0 | 0 | 0 | 0 | 0 | 0 | 0 | 0 | 0 | 0 | 55 |
| 29 | ಬಳ್ಳಾರಿ | 0 | 1 | 0 | 0 | 0 | 0 | 0 | 0 | 0 | 0 | 60 |
| 30 | ವಿಜಯನಗರ | 0 | 0 | 0 | 0 | 0 | 0 | 0 | 0 | 0 | 0 | 71 |
| 31 | ಕೊಪ್ಪಳ | 0 | 0 | 0 | 0 | 0 | 0 | 0 | 0 | 0 | 0 | 73 |
| | ಒಟ್ಟು | 18 | 26 | 10 | 15 | 10 | 5 | 4 | 11 | 1 | 8 | 2877 |

ಅನುಬಂಧ - 3

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆರೋಗ್ಯ ನಿರೀಕ್ಷಣಾಧಿಕಾರಿಗಳ (ಕಿಮಆಸ) ಜಿಲ್ಲಾವಾರು ಮಂಜೂರಾದ ಹುದ್ದೆಗಳ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ಮಂಜೂರು |
|---|---|---|
| | ಬೆಂಗಳೂರು ವಿಭಾಗ | |
| 1 | ನಿರ್ದೇಶನಾಲಯ, ಬೆಂಗಳೂರು ನಗರ | 8 |
| 2 | ಬೆಂಗಳೂರು ನಗರ | 170 |
| 3 | ಬೆಂಗಳೂರು ಗ್ರಾಮಂತರ | 101 |
| 4 | ಚಿತ್ರದುರ್ಗ | 183 |
| 5 | ದಾವಣಗೆರೆ | 157 |
| 6 | ಕೋಲಾರ | 127 |
| 7 | ಶಿವಮೊಗ್ಗ | 214 |
| 8 | ತುಮಕೂರು | 329 |
| 9 | ರಾಮನಗರ | 142 |
| 10 | ಚಿಕ್ಕಬಳ್ಳಾಪುರ | 98 |
| | ಒಟ್ಟು | **1529** |
| | ಮೈಸೂರು ವಿಭಾಗ | |
| 10 | ಮೈಸೂರು | 236 |
| 11 | ಮಂಡ್ಯ | 211 |
| 12 | ಕೊಡಗು | 69 |
| 13 | ಚಾಮರಾಜನಗರ | 104 |
| 14 | ಚಿಕ್ಕಮಗಳೂರು | 161 |
| 15 | ಹಾಸನ | 244 |
| 16 | ದಕ್ಷಿಣ ಕನ್ನಡ | 231 |
| 17 | ಉಡುಪಿ | 187 |
| | ಒಟ್ಟು | **1443** |
| | ಬೆಳಗಾವಿ ವಿಭಾಗ | |
| 18 | ಬೆಳಗಾವಿ | 215 |
| | ಚಿಕ್ಕೋಡಿ | 257 |
| 19 | ವಿಜಯಪುರ | 285 |
| 20 | ಬಾಗಲಕೋಟೆ | 220 |
| 21 | ಧಾರವಾಡ | 124 |
| 22 | ಗದಗ | 115 |
| 23 | ಹಾವೇರಿ | 225 |
| 24 | ಕಾರವಾರ | 211 |
| | ಒಟ್ಟು | **1652** |
| | ಕಲಬುರಗಿ ವಿಭಾಗ | |
| 25 | ಕಲಬುರಗಿ | 306 |
| 26 | ರಾಯಚೂರು | 226 |
| 27 | ಕೊಪ್ಪಳ | 168 |
| 28 | ಬಳ್ಳಾರಿ | 123 |
| 29 | ವಿಜಯನಗರ | 147 |
| 30 | ಬೀದರ್ | 195 |
| 31 | ಯಾದಗಿರಿ | 149 |
| | ಒಟ್ಟು | **1314** |
| | ಜಿಲ್ಲಾವಾರು ಒಟ್ಟು | **5938** |

ಆಡಳಿತಾಧಿಕಾರಿಗಳು (ಕು.ಕ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ಆರೋಗ್ಯ ಸೌಧ, ಬೆಂಗಳೂರು